


# ಸುನಯನ

ಕೇಶವ ಮಳಗಿ

ಚಿತ್ರ: ಜಿ.ಕೆ. ಸತ್ಯ

## ಭಾಗ-2

‘ಮಯೂರ’ದ 50 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಆಯ್ದು ಈ ಅಂಕಣ ಓದುಗರ ಮುಂದಿಡುತ್ತ ಬಂದಿದೆ. 1990ರ ಜುಲೈ ಸಂಚಿಕೆಯಿಂದ ಆಯ್ದ ಈ ಕಥೆಯ ಮೊದಲ ಭಾಗ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಮುಂದಿನ ಭಾಗ ಇಲ್ಲಿದೆ...

ಅಂದಹಾಗೆ, ನಿಮಗೆ ಹೇಳುವುದನ್ನೇ ಮರೆತುಬಿಟ್ಟಿದ್ದೆ. ಈ ಇಳಿಜಾರು ಬಂಡೆ ಇಳಿದು ಅರ್ಧಫರ್ಲಾಂಗು ನಡೆದರೆ, ಗುಡ್ಡದ ಆ ಇನ್ನೊಂದು ತುದಿಯ ಕೊನೆಯ ಹಾಗೂ ಮೊದಲ ಮೆಟ್ಟಿಲು ಸಿಕ್ಕುತ್ತದೆ. ಅಲ್ಲಿಗೆ ನಮ್ಮ ಮನೆ, ನಮ್ಮ ಮನೆಯಲ್ಲಿ ಇಬ್ಬರೇ. ಮುದುಕಿ ಅಮ್ಮ, ನಾನು. ಆಕೆಯ ಬಿಳಿಯ ಕೂದಲುಗಳಷ್ಟೇ ಆಸೆಯನ್ನು ನನ್ನ ಮೇಲಿಟ್ಟುಕೊಂಡಿದ್ದಾಳೆ. ಅವಳ ಕಣ್ಣಿನ ಬೆಳಕು ನಾನು. ನನ್ನ ಬೊಗಸೆಯ ತುಂಬ ಅವಳ ಪ್ರೀತಿಯ ಬೆಳಕು ಯಾವಾಗಲೂ ಕಾಯುತ್ತಿರುತ್ತದೆ. ಎಲ್ಲರಿಂದ ಕಟ್ಟಿಹಾಕುತ್ತದೆ. ನನ್ನ ಕಣ್ಣೋಟದಲ್ಲೇ ನನ್ನ ಬೇಕುಗಳ